# ಅಸತೋಮಾ...

■ ಕೌಂಡಿನ್ಯ
ಕಲೆ: ಎಚ್.ಎಸ್. ಮೋನಪ್ಪ



## ರಾಜಾರಾಯರ ಅಂತ್ಯ

ಮಾಂತ್ರಿಕ ರುದ್ರನಾಗ ತನ್ನ ಮನೆಗೆ ಬಂದಾಗ ಹೆಂಡತಿ ಮಕ್ಕಳು ಸಂತೋಷ ಮತ್ತು ಸಡಗರದಿಂದ ಮಾತಾಡುತ್ತಿರುವುದನ್ನು ಕಂಡನು. ಏನೋ ವಿಶೇಷ ಇರಬೇಕು. ಆದರೆ ಸದಾ ಮುಖ ಬಿಗಿದುಕೊಂಡಿರುವ ಈ ಮನೆಯ ಯಜಮಾನನನ್ನು ಕಂಡ ಕೂಡಲೇ, ಅಲ್ಲಿದ್ದವರೆಲ್ಲಾ ಗಪ್‌ಚುಪ್ ಆಗಿಬಿಟ್ಟರು. ರುದ್ರನಾಗ ತೂಗುಮಣೆಯ ಮೇಲೆ ಕಾಲುಗಳನ್ನು ಚಾಚಿಕೊಂಡು ಕುಳಿತ. ಕೂಡಲೇ ತುಂಗಮ್ಮ ಅವನಿಗೆ ನೀರು ಮತ್ತು ಬೆಲ್ಲ ತಂದು ಇರಿಸಿದಳು.

ರುದ್ರನಾಗ ಹೆಂಡತಿಯ ಮುಖ ನೋಡಿ ಬೆಲ್ಲದ ಚೂರು ಎತ್ತಿಕೊಂಡು 'ಏನು ವಿಷಯ?' ಎಂದ.

'ಪತ್ರ ಬಂದಿದೆ'

'ಯಾರಿಂದ?'

'ನಿಮ್ಮ ತಂಗಿಯಿಂದ'

ರುದ್ರನಾಗ ಬೆಲ್ಲವನ್ನು ಇನ್ನೂ ತಿಂದಿರಲಿಲ್ಲ. ಆದರೆ ಬೆಲ್ಲ ತಿಂದಂತಹ ಸಿಹಿಯ ಅನುಭವ ಆಗುತ್ತಿದೆ. ರುದ್ರನಾಗನ ಮುಖ ಅರಳಿತು. ಕಣ್ಣುಗಳಲ್ಲಿ ಹೊಳಪು. ರುದ್ರನಾಗ ತನ್ನ ತಂಗಿಯನ್ನು ಎಷ್ಟು ಪ್ರೀತಿಸುತ್ತಿದ್ದಾನೆ ಎಂದು ಕಣ್ಣುಗಳ ಹೊಳಪಿನಿಂದ ತಿಳಿಯಬಹುದು. ಅವನಿಗೆ ನೆನಪಾಯಿತು. ತಂಗಿ ಬಸುರಿ... ಈಗ ತುಂಬು ಗರ್ಭಿಣಿ. ಅವನಿಗೆ ಆನಂದ ತಡೆಯಲಾಗಲಿಲ್ಲ.

ತುಂಗಮ್ಮ `ನಾಳೆಯ ದಿನ ನಿಮ್ಮ ತಂಗಿ ಮತ್ತು ಅವಳ ಗಂಡ ಬರುತ್ತಾರಂತೆ. ತವರುಮನೆಯಲ್ಲಿ ಚೊಚ್ಚಲ ಹೆರಿಗೆ ಮುಗಿಸಿಕೊಂಡು ನಂತರ ಹೊರಡುತ್ತಾರೆ'

'ಸಂತೋಷ... ತುಂಬಾ ಸಂತೋಷ. ನನ್ನ ತಂಗಿಗೆ ವಿಪರೀತ ಬಯಕೆ ಇದೆ. ಅವಳು ಕೇಳಿದ ತಿಂಡಿಗಳನ್ನು ಮಾಡಿಕೊಡು. ನಾನವಳಿಗೆ ಮೈಸೂರು ಸಿಲ್ಕ್ ಸೀರೆ ತರುತ್ತೇನೆ' ಎಂದು ನಗುತ್ತಾ ಬೆಡ್‌ರೂಮಿನ ಕಡೆ ನಡೆದ.

ಮನೆಯವರಿಗೆಲ್ಲಾ ಸಂತೋಷದೊಂದಿಗೆ ಈಗ ಆಶ್ಚರ್ಯ ಸಹ ಆಗುತ್ತಿದೆ. ರುದ್ರನಾಗ ನಗುತ್ತಿದ್ದಾನೆ. ಇದು ತುಂಬಾ ಅಪರೂಪ.